

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–06–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಹನ್ನೊಂದು ಯುದ್ಧ ಕಾರ್ಯಾಚರಣೆಗಳು ನಡೆದಿದ್ದುವು. ಸಾಕಷ್ಟು ದೀರ್ಘವಾಗಿದ್ದ ಮೊದಲ ಕಾರ್ಯಾಚರಣೆಯ ಬಗ್ಗೆ ಹೇಳಿಯಾಯಿತು. ಉಳಿದ ಹತ್ತು ಕಾರ್ಯಾಚರಣೆಗಳಲ್ಲಿ ಎರಡನೇ ಮತ್ತು ಮೂರನೆಯ ಕಾರ್ಯಾಚರಣೆಗಳ ನೇತೃತ್ವವನ್ನು ಹಝ್ರತ್ ಹುದೈಫ(ರ) ಮತ್ತು ಹಝ್ರತ್ ಅರ್‌ಫಜ(ರ) ವಹಿಸಿದ್ದರು. ಅದು ಒಮಾನಿನ ಧರ್ಮತ್ಯಾಗಿ ದಂಗೆಗಾರರ ವಿರುದ್ಧವಾಗಿತ್ತು. ಒಮಾನ್ ಎಂಬುದು ಬಹ್‌ರೈನಿನ ಸಮೀಪವಿರುವ ಯಮನಿನ ಒಂದು ಪಟ್ಟಣವಾಗಿದೆ. ಅಲ್ಲಿ ವಿಗ್ರಹಪೂಜಕರು ಮತ್ತು ಅಗ್ನಿಪೂಜಕರು ನೆಲೆಸಿದ್ದರು. ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಕಾಲದಲ್ಲಿ ಒಮಾನ್ ಇರಾನಿಯರ ವಶದಲ್ಲಿ ಇತ್ತು. ಅವರ ಕಡೆಯಿಂದ ಜೈಫರ್ ಎಂಬ ಹೆಸರಿನ ವ್ಯಕ್ತಿ ಅಲ್ಲಿಯ ಅಧಿಕಾರಿಯಾಗಿದ್ದನು.

ಹಝ್ರತ್ ಪೈಗಂಬರ್(ಸ) ನಿಧನರಾದ ನಂತರ ಅರೇಬ್ಯದ ನಾಲ್ಕೂ ಕಡೆಯಲ್ಲೂ ಧರ್ಮತ್ಯಾಗ ಮತ್ತು ದಂಗೆ ಹರಡಿದಾಗ ಹಝ್ರತ್ ಅಬೂಬಕರ್(ರ) ಹಝ್ರತ್ ಅಮ್ರ್ ಬಿನ್ ಆಸ್(ರ)ರನ್ನು ಮದೀನಕ್ಕೆ ಕರೆದರು. ಮೊತ್ತೊಂದೆಡೆ ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಲಖೀದ್ ಬಿನ್ ಮಾಲಿಕ್ ಅಝ್ದಿ ಎಂಬವನು ಅವರೆಡೆಯಿಂದ ಎದ್ದನು. ಅವನ ಬಿರುದುನಾಮ ಝುತ್ತಾಜ್ ಎಂದಾಗಿತ್ತು. ಅವನು ಪ್ರವಾದಿತ್ವದ ವಾದವನ್ನು ಮಾಡಿದನು. ಒಮಾನಿನ ಮೂಢರು ಅವನನ್ನು ಅನುಸರಿಸಿದರು. ಅವನು ಒಮಾನನ್ನು ತನ್ನ ನಿಯಂತ್ರಣಕ್ಕೆ ತಂದನು. ಜೈಫರ್ ಮತ್ತು ಅವನ ಸಹೋದರನಿಗೆ ಪರ್ವತಗಳಲ್ಲಿ ಅಭಯ ಪಡೆಯಬೇಕಾಯಿತು. ಈ ಎಲ್ಲ ಸ್ಥಿತಿಗತಿಗಳ ಬಗ್ಗೆ ಜೈಫರ್ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿ ಸಹಾಯವನ್ನು ಬೇಡಿದರು. ಹಝ್ರತ್ ಅಬೂಬಕರ್(ರ) ಇಬ್ಬರು ಅಮೀರರನ್ನು ಅವರ ಬಳಿಗೆ ಕಳುಹಿಸಿದರು. ಒಬ್ಬರು ಹುದೈಫ ಬಿನ್ ಮುಹ್‌ಸಿನ್ ಗ಼ಲ್‌ಫಾನಿ ಹಮೀರಿಯನ್ನು(ರ) ಒಮಾನಿನ ಕಡೆಗೆ ಮತ್ತೊಬ್ಬರಾದ ಅರ್ಜ಼ಫ ಬಿನ್ ಹರ್ಸಮರನ್ನು(ರ) ಮಹ್‌ರಾದ ಕಡೆಗೆ. ಅವರು ಜೊತೆಯಾಗಿ ಯಾತ್ರೆ ಮಾಡಲು ಮತ್ತು ಯುದ್ಧದ ಆರಂಭ ಒಮಾನಿನಿಂದ ಮಾಡಲು ಹಝ್ರತ್ ಅಬೂಬಕರ್(ರ) ಅವರಿಬ್ಬರಿಗೆ ಆದೇಶ ನೀಡಿದರು. ಮಾರಾ ಎಂಬುದು ಯಮನಿನ ಒಂದು ಗೋತ್ರದ ಹೆಸರಾಗಿತ್ತು. ಒಮಾನಿನಲ್ಲಿ ಯುದ್ಧ ನಡೆಯುವಾಗ ಹುದೈಫ ಪೂರ್ತಿ ಸೇನೆಯ ಸರ್ವಾಧಿಕಾರಿ ಆಗಿರಬೇಕು ಮತ್ತು ಮಹ್‌ರದಲ್ಲಿ ಯುದ್ಧ ನಡೆಯುವಾಗ ಹುದೈಫ ಸೇನಾಧಿಪತಿಯಾಗಿರಬೇಕು ಎಂದು ಹಝ್ರತ್ ಅಬೂಬಕರ್(ರ) ಆದೇಶ ನೀಡಿದ್ದರು.

ಹಝ್ರತ್ ಅಬೂಬಕರ್(ರ) ಅವರಿಬ್ಬರ ಸಹಾಯಕ್ಕಾಗಿ ಹಝ್ರತ್ ಇಕ್ರಿಮರನ್ನು(ರ) ಕಳುಹಿಸಿದರು. ಹಝ್ರತ್ ಅಬೂಬಕರ್(ರ)ರ ಆದೇಶ ಪ್ರಕಾರ ಹಝ್ರತ್ ಇಕ್ರಿಮ(ರ) ತನ್ನ ಸೈನ್ಯದೊಂದಿಗೆ ಒಮಾನಿನ ಕಡೆಗೆ ಅರ್ಜ಼ಫ(ರ) ಮತ್ತು ಹುದೈಫ(ರ)ರ ಹಿಂದೆ ಹಿಂದೆ ಹೊರಟರು. ಅವರಿಬ್ಬರೂ ಒಮಾನಿಗೆ ತಲುಪುವುದಕ್ಕೆ ಮುಂಚಿತವಾಗಿ ಒಮಾನಿನ ಸಮೀಪವಿರುವ ರುಜಾಮ್ ಎಂಬ ಪ್ರದೇಶದಲ್ಲಿ ಹಝ್ರತ್ ಇಕ್ರಿಮ(ರ) ಅವರನ್ನು ಸೇರಿಕೊಂಡರು. ಅವರು ಜೈಫರ್ ಮತ್ತು ಅವನ ಸಹೋದರ ಅಬಾದ್‌ನಿಗೆ (ಮುಸ್ಲಿಮರ ಸೈನ್ಯ ತಲುಪಿದ ಕುರಿತು) ಸಂದೇಶವನ್ನು ಕಳುಹಿಸಿದರು. ಮುಸ್ಲಿಮ್ ಸೇನೆಯ ಸರದಾರರ ಸಂದೇಶ ಲಭಿಸಿದ ನಂತರ, ಮೊದಲು ಅಡಗಿ ಕುಳಿತುಕೊಂಡಿದ್ದ ಜೈಫರ್ ಮತ್ತು ಅಬಾದ್ ತಮ್ಮ ತಮ್ಮ ತಂಗುದಾಣಗಳಿಂದ ಹೊರಟು ಸುಹಾರಿಗೆ ಬಂದು ಡೇರೆ ಹಾಕಿದರು ಮತ್ತು ಹುದೈಫ, ಅರ್ಜ಼ಫ ಮತು ಇಕ್ರಿಮರಿಗೆ ಅವರ ಬಳಿಗೆ ಬರುವಂತೆ ಸಂದೇಶ ಕಳುಹಿಸಿದರು. ಹೀಗೆ ಮುಸ್ಲಿಮರ ಸೈನ್ಯ ಸುಹಾರಿಗೆ ಬಂದುಸೇರಿದರು ಮತ್ತು ಅದಕ್ಕೆ ಸೇರಿಕೊಂಡ ಪ್ರದೇಶದಿಂದ ಧರ್ಮತ್ಯಾಗಿಗಳನ್ನು ತೊಲಗಿಸಿದರು. ಮತ್ತೊಂದೆಡೆ ಲಖೀದ್ ಬಿನ್ ಮಾಲಿಕನಿಗೆ ಇಸ್ಲಾಮಿನ ಸೈನ್ಯ ತಲುಪಿದ ಸುದ್ದಿ ಲಭಿಸಿದಾಗ ಅವನು ತನ್ನ ಸೈನ್ಯದೊಂದಿಗೆ ಹೊರಟು ದಬಾ ಪ್ರದೇಶದಲ್ಲಿ ತಂಗಿದನು. ದಬಾ ಎಂಬ ಪ್ರದೇಶದಲ್ಲಿ ಲಖೀದಿನ ಸೈನ್ಯದೊಂದಿಗೆ ಘೋರವಾದ ಯುದ್ಧ ನಡೆಯಿತು. ಆರಂಭದಲ್ಲಿ ಲಖೀದ್ ಮೇಲುಗೈ ಸಾಧಿಸುತ್ತಿದ್ದನು. ಮುಸ್ಲಿಮರು ಪರಾಜಿತಗೊಳ್ಳುವ ಸಾಧ್ಯತೆಯಿತ್ತು. ಆದರೆ ಅನಂತರ ಲಖೀದಿನ ಸೈನ್ಯ ಚಂಚಲಗೊಂಡಿತು ಮತ್ತು ಪರಾರಿಯಾಗಲು ಶುರುವಾಯಿತು. ಮುಸ್ಲಿಮರು ಅವರನ್ನು ಹಿಂಬಾಲಿಸಿ 10 ಸಾವಿರ ಯೋಧರನ್ನು ವಧಿಸಿದರು ಹಾಗೂ ಮಕ್ಕಳು ಮತ್ತು ಮಹಿಳೆಯರನ್ನು ಬಂಧಿಸಿದರು. ಸಂಪತ್ತು ಮತ್ತು ಮಾರುಕಟ್ಟೆಯನ್ನು ವಶಪಡಿಸಿಕೊಂಡರು. ಅದರ ಐದನೇ ಒಂದು ಭಾಗವನ್ನು ಅರ್ಜ಼ಫ(ರ)ರ ಮೂಲಕ ಹಝ್ರತ್ ಅಬೂಬಕರ್(ರ)ರ ಸನ್ನಿಧಿಗೆ ಕಳುಹಿಸಲಾಯಿತು. ಈ ರೀತಿಯಲ್ಲಿ ಒಮಾನಿನಲ್ಲಿ ಈ ಪಿತೂರಿ ಕೊನೆಗೊಂಡಿತು. ಮುಸ್ಲಿಮರ ಆಡಳಿತ ಶಕ್ತವಾದ ಅಡಿಪಾಯದ ಮೇಲೆ ಸ್ಥಾಪನೆಯಾಯಿತು.

ಯುದ್ಧದ ನಂತರ ಹಝ್ರತ್ ಹುದೈಫ(ರ) ಒಮಾನಿನಲ್ಲೇ ನೆಲೆಸಿದರು. ಅಲ್ಲಿಯ ಸ್ಥಿತಿಗತಿಗಳನ್ನು ಸರಿಪಡಿಸುವ, ಶಾಂತಿ

ಮತ್ತು ಸಮಾಧಾನವನ್ನು ಸ್ಥಾಪಿಸುವ ಕಾರ್ಯದಲ್ಲಿ ಅವರು ನಿರತರಾದರು. ಹಝ್ರತ್ ಅರ್ಜಫ(ರ) ಯುದ್ಧ ಸಂಪತ್ತಿನೊಂದಿಗೆ ಮದೀನಕ್ಕೆ ಹೊರಟರು. ಹಝ್ರತ್ ಇಕ್ರಿಮ(ರ)ರಿಗೆ ಹುಧೈಫ ಮತ್ತು ಅರ್ಜಫರಿಗೆ ನೆರವು ನೀಡಿದ ನಂತರ ಮಹ್‌ರಗೆ ಹೋಗಲು, ಅನಂತರ ಅಲ್ಲಿಂದ ಯಮನಿಗೆ ಹೋಗಲು, ಅಲ್ಲಿ ಯಮನ್ ಮತ್ತು ಹಿಝ್ರೇ ಮೌತಿನಲ್ಲಿ ನಡೆಯುವ ಕಾರ್ಯಾಚರಣೆಗಳಲ್ಲಿ ಮುಹಾಜಿರ್ ಬಿನ್ ಅಬು ಉಮಯ್ಯರ ಜೊತೆಗೆ ಇರಲು, ಒಮಾನ್ ಮತ್ತು ಯಮನಿನ ನಡುವೆ ನೆಲೆಸಿರುವ ಪ್ರದೇಶಗಳಲ್ಲಿ ಧರ್ಮತ್ಯಾಗಿಗಳಾದ ದಂಗೆಗಾರರನ್ನು ದಮನಿಸಲು ಮತ್ತು ಯುದ್ಧದಲ್ಲಿ ಮಾಡುವ ಕಾರ್ಯಸಾಧನೆಗಳ ಮಾಹಿತಿಗಳನ್ನು ತಿಳಿಸುತ್ತಾ ಇರಲು ಮೊದಲೇ ಹಝ್ರತ್ ಅಬೂಬಕರ್(ರ) ಆದೇಶ ನೀಡಿದ್ದರು. ಹೀಗೆ ಮುಸ್ಲಿಮರ ದೊಡ್ಡ ಸೈನ್ಯದೊಂದಿಗೆ ಹಝ್ರತ್ ಇಕ್ರಿಮ(ರ) ಇತರ ಮುಶ್ರಿಕರನ್ನು ನಿಗ್ರಹಿಸಲು ಮುಂದಕ್ಕೆ ಹೊರಟರು. ಅವರು ಮಹ್‌ರದಿಂದ ತಮ್ಮ ಯುದ್ಧ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದರು. ಹಝ್ರತ್ ಇಕ್ರಿಮ(ರ) ಮಹ್‌ರ ಗೋತ್ರಗಳು ಮತ್ತು ಅದರ ಸುತ್ತಮುತ್ತ ಇರುವ ಪ್ರದೇಶಗಳ ಮೇಲೆ ದಾಳಿ ನಡೆಸಿದರು. ಹಝ್ರತ್ ಇಕ್ರಿಮ(ರ)ರ ಸೈನ್ಯವನ್ನು ಎದುರಿಸಲು ಮಹ್‌ರದ ಜನರು ಎರಡು ಗುಂಪುಗಳಾಗಿ ವಿಂಗಡನೆಗೊಂಡರು. ಒಂದು ಗುಂಪು ಜೈರೂತ್ ಎಂಬ ಪ್ರದೇಶದಲ್ಲಿ ಶಖ್‌ರಿಯತ್ ಎಂಬ ಹೆಸರಿನ ಒಬ್ಬ ವ್ಯಕ್ತಿಯ ನೇತೃತ್ವದಲ್ಲಿ ಯುದ್ಧಕ್ಕಾಗಿ ತಯಾರಾಯಿತು. ಮತ್ತೊಂದು ಗುಂಪು ನಜದಿನಲ್ಲಿ ಬನೂ ಮಹಾರಿಬಿನ ಒಬ್ಬ ವ್ಯಕ್ತಿಯಾದ ಮುಸ್‌ಬಿಹ್‌ನ ನೇತೃತ್ವದಲ್ಲಿ ನಿಂತಿತ್ತು. ಈ ಇಬ್ಬರು ಸರದಾರರು ಪರಸ್ಪರ ವಿರೋಧಿಗಳಾಗಿದ್ದರು. ಶಖ್‌ರಿಯತಿನ ಜೊತೆಗೆ ಸ್ವಲ್ಪವೇ ಜನರು ಇರುವುದಾಗಿ ಕಂಡಾಗ ಅವನನ್ನು ಇಸ್ಲಾಂ ಧರ್ಮಕ್ಕೆ ಮರಳಿ ಬರಲು ಹಝ್ರತ್ ಇಕ್ರಿಮ(ರ) ಆಹ್ವಾನಿಸಿದರು. ಅವನು ಮೊದಲು ಮುಸ್ಲಿಮನಾಗಿದ್ದನು. ಮರಳಿ ಮುಸ್ಲಿಮನಾಗಲು ಮತ್ತು ಮುಸ್ಲಿಮರ ವಿರುದ್ಧ ಯುದ್ಧ ನಡೆಸದಿರಲು ಹಝ್ರತ್ ಇಕ್ರಿಮ(ರ) ಅವನೊಡನೆ ಹೇಳಿದರು. ಹೀಗೆ ಹುರಿದುಂಬಿಸಿದ ಕೂಡಲೇ ಶಖ್‌ರಿಯತ್ ಅವರ ಆಮಂತ್ರಣವನ್ನು ಸ್ವೀಕಾರ ಮಾಡಿದನು. ಅನಂತರ ಹಝ್ರತ್ ಇಕ್ರಿಮ(ರ) ಮುಸ್‌ಬಿಹ್‌ನನ್ನು ಇಸ್ಲಾಂ ಧರ್ಮಕ್ಕೆ ಬಂದುಸೇರಲು ಆಮಂತ್ರಣ ಕೊಟ್ಟರು. ಆದರೆ ಅವನು ನಿರಾಕರಿಸಿದನು. ಹಝ್ರತ್ ಇಕ್ರಿಮ(ರ) ಅವನ ಸೈನ್ಯದ ಕಡೆಗೆ ಹೊರಟರು. ಶಖ್‌ರಿಯತ್ ಕೂಡ ಅವರ ಜೊತೆಗೆ ಇದ್ದನು. ನಜದಿನಲ್ಲಿ ಮುಸ್‌ಬಿಹ್‌ನ ಸೈನ್ಯದ ವಿರುದ್ಧ ಈ ಇಬ್ಬರ ಸೈನ್ಯಗಳ ಹೋರಾಟ ನಡೆಯಿತು. ಅಲ್ಲಾಹನು ಧರ್ಮತ್ಯಾಗಿಗಳಾದ ದಂಗೆಗಾರರ ಸೇನೆಯನ್ನು ಪರಾಜಿತಗೊಳಿಸಿದನು ಮತ್ತು ಅವರ ಸರದಾರ ವಧಿಸಲ್ಪಟ್ಟನು. ಓಡಿಹೋಗುವವರನ್ನು ಮುಸ್ಲಿಮರು ಹಿಂಬಾಲಿಸಿದರು, ಅವರಲ್ಲಿ ಅನೇಕರನ್ನು ವಧಿಸಿದರು, ಅನೇಕರನ್ನು ಬಂಧಿಸಲಾಯಿತು ಮತ್ತು ಯುದ್ಧ ಸಂಪತ್ತಾಗಿ ಎರಡು ಸಾವಿರದಷ್ಟು ಉತ್ತಮ ಗುಣಮಟ್ಟದ ಒಂಟೆಗಳು ಮುಸ್ಲಿಮರಿಗೆ ಲಭಿಸಿದುವು.

ಮಹ್‌ರದ ನಂತರ ಯಮನಿಗೆ ಹೋಗಲು, ಯಮನ್ ಮತ್ತು ಹಿಝ್ರೆ ಮೌತಿನ ಕಾರ್ಯಾಚರಣೆಗಳಲ್ಲಿ ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯರ ಜೊತೆಗೆ ಇರಲು ಹಾಗೂ ಒಮಾನ್ ಮತ್ತು ಯಮನಿನ ನಡುವೆ ಇರುವ ಜನರಲ್ಲಿ ಧರ್ಮತ್ಯಾಗ ಮಾಡಿದವರನ್ನು ನಿಗ್ರಹಿಸಲು ಹಝ್ರತ್ ಅಬೂಬಕರ್ ಸಿದ್ದೀಖ್(ರ) ಹಝ್ರತ್ ಇಕ್ರಿಮ(ರ)ರಿಗೆ ನಿರ್ದೇಶನ ಕೊಟ್ಟಿದ್ದರು. ಹೀಗೆ ಹಝ್ರತ್ ಇಕ್ರಿಮ(ರ) ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ನಿರ್ದೇಶನ ಪ್ರಕಾರ ಮಹ್‌ರದಿಂದ ಹೊರಟು ಯಮನಿನ ಕಡೆಗೆ ಹೋದರು. ಹಝ್ರತ್ ಇಕ್ರಿಮ(ರ) ತನ್ನ ಪೂರ್ತಿ ತಂಗುದಾಣವನ್ನು ದಕ್ಷಿಣ ಯಮನಿನಲ್ಲೇ ಇರಿಸಿದರು. ಅಲ್ಲಿ ನಖ್ಹಾ ಮತ್ತು ಹಮೀರಿನ ಗೋತ್ರಗಳನ್ನು ಸೋಲಿಸುವುದರಲ್ಲಿ ನಿರತರಾದರು. ಹಾಗೆ ಉತ್ತರ ಯಮನಿನ ಕಡೆಗೆ ಹೋಗುವ ಆವಶ್ಯಕತೆ ಬರಲಿಲ್ಲ. ಯಮನಿನ ಜೊತೆಗೆ ಖಿಂದ ಗೋತ್ರವು ನೆಲೆಸಿತ್ತು. ಅದು ಹಿಝ್ರೆ ಮೌತಿನ ಪ್ರದೇಶದಲ್ಲಿ ಇತ್ತು. ಆ ಪ್ರದೇಶದ ಅಧಿಕಾರಿ ಹಝ್ರತ್ ಝಿಯಾದ್ ಬಿನ್ ಲಬೀದ್ ಆಗಿದ್ದರು. ಅವರು ಝಕಾತಿನ ಬಗ್ಗೆ ಕಠಿಣ ಕ್ರಮ ಕೈಗೊಂಡಾಗ ಅವರ ವಿರುದ್ಧ ಜನರು ದಂಗೆಯೆದ್ದರು. ಹೀಗೆ ಹಝ್ರತ್ ಇಕ್ರಿಮ(ರ) ಮತ್ತು ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ(ರ) ಇಬ್ಬರೂ ಅವರ ನೆರವಿಗಾಗಿ ಹೊರಟರು.

ಹಝ್ರತ್ ಇಕ್ರಿಮ(ರ) ಧರ್ಮತ್ಯಾಗಿಗಳಿಗೆ ಸಂಬಂಧಿಸಿದ ಕಾರ್ಯಾಚರಣೆಗಳನ್ನು ಮುಗಿಸಿದ ನಂತರ ಮದೀನಕ್ಕೆ ಮರಳಿದರು. ಅವರು ಮದೀನಕ್ಕೆ ತಲುಪಿದಾಗ, ಖಾಲಿದ್ ಬಿನ್ ಸಈದ್‌ರ ಸಹಾಯಕ್ಕಾಗಿ ಹೊರಡಲು ಅವರಿಗೆ ಹಝ್ರತ್ ಅಬೂಬಕರ್(ರ) ಆದೇಶ ನೀಡಿದರು. ಧರ್ಮತ್ಯಾಗಿಗಳಿಗೆ ಸಂಬಂಧಿಸಿದ ಯುದ್ಧಗಳಲ್ಲಿ ಭಾಗವಹಿಸಿದ ತನ್ನ ಸೈನ್ಯಕ್ಕೆ ಹಝ್ರತ್ ಇಕ್ರಿಮ(ರ) ಬಿಡುವು ನೀಡಿದ್ದರು. ಹಝ್ರತ್ ಅಬೂಬಕರ್(ರ) ಆ ಸೈನಿಕರಿಗೆ ಬದಲಾಗಿ ಬೇರೊಂದು ಸೇನೆಯನ್ನು ತಯಾರು ಮಾಡಿಕೊಂಡು ಹಝ್ರತ್ ಇಕ್ರಿಮ(ರ)ರ ಧ್ವಜದ ಅಡಿಯಲ್ಲಿ ಸಿರಿಯಗೆ ಹೋಗಲು ಅದಕ್ಕೆ ಆದೇಶ ನೀಡಿದರು. ಅಲ್ಲಿ ಹಝ್ರತ್ ಇಕ್ರಿಮ(ರ) ಮಾಡಿದ ಶ್ರೇಷ್ಠ ಕಾರ್ಯಸಾಧನೆಗಳು ಮತ್ತು ಬಹಳ ಧೈರ್ಯದಿಂದ ಹೋರಾಡಿ ಹುತಾತ್ಮರಾದ ಬಗ್ಗೆಗಿನ ವಿವರಣೆ ಸಿರಿಯದ ಕಾರ್ಯಾಚರಣೆಗಳಿಗೆ ಸಂಬಂಧಿಸಿ ಪ್ರಸ್ತಾಪಿಸಲಾಗುವಾಗ ವಿವರಿಸಲಾಗುವುದು – ಇನ್‌ಶಾ ಅಲ್ಲಾಹ್.

ಐದನೇ ಕಾರ್ಯಾಚರಣೆಯು ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಹಝ್ರತ್ ಶುರಹ್‌ಬೀಲ್ ಬಿನ್ ಹಸನ(ರ) ನಡೆಸಿದ್ದಾಗಿತ್ತು. ಆರಂಭ ಕಾಲದಲ್ಲಿ ಇಸ್ಲಾಂ ಸ್ವೀಕಾರ ಮಾಡಿದವರಲ್ಲಿ ಹಝ್ರತ್ ಶುರಹ್‌ಬೀಲ್(ರ) ಒಳಪಡುತ್ತಾರೆ. ಅವರು ತಮ್ಮ ಸಹೋದರರೊಂದಿಗೆ ಅಬೀಸೀನಿಯದ ಕಡೆಗೆ ವಲಸೆ ಹೋಗಿದ್ದರು. ಅಬೀಸೀನಿಯದಿಂದ ಮದೀನಕ್ಕೆ ಮರಳಿ ಬಂದಾಗ ಅವರು ಬನೂ ಝುರೀಕ್ ಗೋತ್ರದ ಮನೆಗಳಲ್ಲಿ ತಂಗಿದ್ದರು. ಖಿಲಾಫತ್ ಕಾಲದಲ್ಲಿ ಅವರು ಪ್ರಸಿದ್ಧ ಸೇನಾಧಿಪತಿಗಳಲ್ಲಿ ಒಬ್ಬರಾಗಿದ್ದರು. ಅವರು ಹಿಜರೀ 18ರಲ್ಲಿ, 67ನೇ ವಯಸಿನಲ್ಲಿ ಅಮ್‌ವಾಸಿನಲ್ಲಿ ಹರಡಿದ ಪ್ಲೇಗ್ ರೋಗದಿಂದ ನಿಧನರಾದರು.

ಆರನೇ ಕಾರ್ಯಾಚರಣೆಯು ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಹಝ್ರತ್ ಅಮ್ರ್ ಬಿನ್ ಆಸ್(ರ) ನಡೆಸಿದ್ದಾಗಿತ್ತು.

ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ಅಮ್ರ್ ಬಿನ್ ಆಸ್(ರ)ರಿಗೆ ಕೊಟ್ಟು ಅವರೊಡನೆ ಖುಝಾಅ, ವದೀಅ ಮತ್ತು ಹಾರಿಸ್ ಎಂಬೀ ಮೂರು ಗೋತ್ರಗಳನ್ನು ಎದುರಿಸಲು ಆದೇಶ ನೀಡಿದರು. ಖುಝಾಅ ಕೂಡ ಅರೇಬಿಯದ ಪ್ರಸಿದ್ಧ ಗೋತ್ರವಾಗಿದೆ. ಅದು ಮದೀನದಿಂದ 10 ರಾತ್ರಿಗಳ ಯಾತ್ರೆ ಮಾಡುವಷ್ಟು ದೂರದಲ್ಲಿ ಖುರಾ ಕಣಿವೆಗೆ ಸ್ವಲ್ಪ ಮುಂದೆ ಮದಾಇನ್ ಸಾಲಿಹಿನ ಪಶ್ಚಿಮದಲ್ಲಿ ನೆಲೆಸಿತ್ತು. ಹಝ್ರತ್ ಅಮ್ರ್ ಬಿನ್ ಆಸ್(ರ)ರ ಸಂಕ್ಷಿಪ್ತ ಪರಿಚಯ ಹೀಗಿದೆ: ಅವರ ತಂದೆಯ ಹೆಸರು ಆಸ್ ಬಿನ್ ವಾಯಿಲ್ ಎಂದಾಗಿತ್ತು. ಅವರ ತಾಯಿಯ ಹೆಸರು ನಾಬಿಗ ಬಿನ್ತ್ ಹರ್ಮಲ ಎಂದಾಗಿತ್ತು. ಹಝ್ರತ್ ಅಮ್ರ್ ಬಿನ್ ಆಸ್(ರ) ಹಿಜರೀ 8ರಲ್ಲಿ ಮಕ್ಕಾ ವಿಜಯಕ್ಕೆ 6 ತಿಂಗಳಿಗೆ ಮುಂಚಿತವಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರು. ಅವರ ಕಾರ್ಯಸಾಧನೆಗಳಲ್ಲಿ ಒಂದು ಪ್ರಮುಖ ಕಾರ್ಯಸಾಧನೆ ಈಜಿಪ್ಟ್ ವಿಜಯವೂ ಆಗಿದೆ.

ಹಝ್ರತ್ ಅಬೂಬಕರ್(ರ) ತಯಾರಿಸಿದ ಹನ್ನೊಂದು ಧ್ವಜಗಳಲ್ಲಿ ಒಂದು ಧ್ವಜ ಹಝ್ರತ್ ಅಮ್ರ್ ಬಿನ್ ಆಸ್‌ರಿಗೂ ಇತ್ತು. ಖುಝಾಅದ ಧರ್ಮತ್ಯಾಗಿಗಳ ವಿರುದ್ಧ ಯುದ್ಧ ಮಾಡುವ ಕಾರ್ಯವನ್ನು ಹಝ್ರತ್ ಅಬೂಬಕರ್(ರ) ಅವರಿಗೆ ಒಪ್ಪಿಸಿದರು. ಏಕೆಂದರೆ, ಅವರು ಹಝ್ರತ್ ಪೈಗಂಬರ್(ಸ)ರ ಜೀವಿತ ಕಾಲದಲ್ಲೂ ಧಾತುಸ್ಸಲಾಸಿಲ್ ಯುದ್ಧದಲ್ಲಿ ಖುಝಾಅ ಗೋತ್ರದ ವಿರುದ್ಧ ಹೋರಾಡಿದ್ದರು ಹಾಗೂ ಆ ಗೋತ್ರದ ಎಲ್ಲ ಸ್ಥಿತಿಗತಿಗಳ ಕುರಿತು ಮತ್ತು ಎಲ್ಲ ರಸ್ತೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಬನೂ ಖುಝಾಅ ಗೋತ್ರದವರು ಸಂತೋಷದಿಂದ ಇಸ್ಲಾಂ ಸ್ವೀಕಾರ ಮಾಡಿರಲಿಲ್ಲ. ಅವರ ಹೃದಯಗಳಲ್ಲಿ ಇಸ್ಲಾಮಿನ ಪ್ರೇಮವಿದ್ದಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅವರು ಝಕಾತ್ ನೀಡುವುದನ್ನು ನಿರಾಕರಿಸಿದರು. ಖಿಲಾಫತಿನ ಸನ್ನಿಧಾನದಿಂದ ಆದೇಶ ಲಭಿಸುತ್ತಲೇ ಅಮ್ರ್ ಬಿನ್ ಆಸ್(ರ) ತನ್ನ ಸೇನೆಯೊಂದಿಗೆ ಖುಝಾಅಗೆ ತಲುಪಿದರು. ಬನೂ ಖುಝಾಅ ಗೋತ್ರವು ಯುದ್ಧಕ್ಕಾಗಿ ಪೂರ್ಣ ರೀತಿಯಲ್ಲಿ ತಯಾರಾಗಿರುವುದನ್ನು ಅಲ್ಲಿಗೆ ತಲುಪಿದಾಗ ಅವರು ಕಂಡರು. ಹೋರಾಟ ಆರಂಭವಾಯಿತು ಮತ್ತು ಘೋರ ಯುದ್ಧ ನಡೆಯಿತು. ಮೊದಲಿನಂತೆ ಆಗಲೂ ಖುಝಾಅಗೆ ಸೋಲು ಅನುಭವಿಸಬೇಕಾಯಿತು. ಅಮ್ರ್ ಬಿನ್ ಆಸ್(ರ) ಅವರಿಂದ ಝಕಾತ್ ಪಡೆದುಕೊಂಡು ಅವರನ್ನು ಪುನಃ ಇಸ್ಲಾಮಿಗೆ ವಿಧೇಯರನ್ನಾಗಿ ಮಾಡಿಕೊಂಡು ವಿಜಯಶಾಲಿಯಾಗಿ ಮದೀನಕ್ಕೆ ಮರಳಿ ಬಂದರು. ಉಳಿದ ಕಾರ್ಯಾಚರಣೆಗಳ ಬಗ್ಗೆ ಮುಂದೆ ಪ್ರಸ್ತಾಪಿಸಲಾಗುವುದು – ಇನ್‌ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 17-06-2022*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon